

## ಯಶಸ್ಸಿನಲ್ಲಿ ಸಂಗೀತಕ್ಕೂ ಪಾಲು

**ಚಿನ್ಮಯ್ ಜಿ.ಕೆ.**

**ಎಸ್‌ಎಸ್‌ಎಲ್‌ಸಿಯಲ್ಲಿ 624 ಅಂಕ (ಇಂಗ್ಲಿಷ್ ಮಾಧ್ಯಮ), ಎರಡನೇ ಸ್ಥಾನ, ಎಸ್‌ಡಿಎಂ ಇಂಗ್ಲಿಷ್ ಮಾಧ್ಯಮ ಶಾಲೆ, ಬೆಳ್ತಂಗಡಿ**



ನಿತ್ಯವೂ ತಪ್ಪದೇ ಓದುತ್ತಿದ್ದೆ. ಬೆಳಿಗ್ಗೆ 6ರಿಂದ 7ರವರೆಗೆ ಹಾಗೂ ಸಂಜೆ ಮೂರು ತಾಸು ಓದುತ್ತಿದ್ದೆ. ಶಿಕ್ಷಕರು ಮೇಲಿಂದ ಮೇಲೆ ಪರೀಕ್ಷೆ ಮತ್ತು ಪುನರ್‌ಮನನ ತರಗತಿಗಳನ್ನು ಮಾಡುತ್ತಿದ್ದರು. ಅವರು ಕೊಟ್ಟ ಕೆಲಸಗಳನ್ನು ತಪ್ಪದೇ ಮುಗಿಸುತ್ತಿದ್ದೆ. ನಾನು 625 ಅಂಕ ಬಂದೇ ಬರುತ್ತದೆ ಎಂದು ನಿರೀಕ್ಷೆ ಮಾಡಿದ್ದೆ. ವಿಜ್ಞಾನದಲ್ಲಿ ಒಂದು ಅಂಕ ಕಡಿಮೆ ಬಂದಿದೆ. ಪುನರ್ ಮೌಲ್ಯಮಾಪನಕ್ಕೆ ಅರ್ಜಿ ಹಾಕಿದ್ದೇನೆ.

ಶಾಲೆ ಆರಂಭದಿಂದಲೇ ಓದುವುದು ಹೆಚ್ಚು ಅಂಕ ಗಳಿಸಲು ಇರುವ ಸುಲಭ ಮಾರ್ಗ. ಪರೀಕ್ಷೆಯ ಸಮಯದಲ್ಲಿ ಓದಲು ಆರಂಭಿಸಿದರೆ ಗುರಿ ಮುಟ್ಟುವುದು ಕಷ್ಟ ಆಗುತ್ತದೆ. ಕೆಲವೊಂದು ಪರಿಕಲ್ಪನೆಗಳು ಅರ್ಥ ಆಗದಿದ್ದರೆ ಅರ್ಥ ಮಾಡಿಕೊಳ್ಳದೆ ಮುಂದಕ್ಕೆ ಹೋಗಬಾರದು. ಏನೇ ಡೌಟ್‌ಗಳಿದ್ದರೂ ಶಿಕ್ಷಕರ ಜೊತೆ ಸಮಾಲೋಚನೆ ಮಾಡಬೇಕು. ಪಠ್ಯದಲ್ಲಿ ಅಭ್ಯಾಸ ಮತ್ತು ಶಿಕ್ಷಕರು ಹೇಳಿದ್ದನ್ನು ಪಾಲಿಸಿದರೆ ಸಾಕು. ನನಗೆ ಸಂಗೀತ ಕಲಿಕೆಯ ಬಗ್ಗೆ ಆಸಕ್ತಿ ಇದೆ. ಅದೂ ನನ್ನ ಓದಿಗೆ ಸಹಾಯ ಮಾಡಿದೆ ಎಂದುಕೊಂಡಿದ್ದೇನೆ.

ಅಪ್ಪ ಗಣೇಶ ಭಟ್ ಉಪನ್ಯಾಸಕರು, ಅಮ್ಮ ಮಾಲಿನಿ ಗಣಿತ ಶಿಕ್ಷಕಿ.

ಅಧಿಕ ಅಂಕ ಗಳಿಸುವ ಗುಟ್ಟು ಎಂದರೆ ಅಂದಂದಿನ ಪಾಠಗಳನ್ನು ಅಂದೇ ಓದಿ ಮನನ ಮಾಡಿ ಮುಗಿಸುವುದು. ನಮಗೆ ಬೇಕಾದ ನೋಟ್ಸ್‌ಗಳನ್ನು ನಾವೇ ಸಿದ್ಧಪಡಿಸಿಕೊಂಡು ಪುನರಾವರ್ತನೆಗೆ ಹೆಚ್ಚಿನ ಸಮಯ ಮೀಸಲಿಡುವುದು ಒಳಿತು. ಈ ಅಂಶಗಳನ್ನು ಪಾಲಿಸಿದರೆ ಉತ್ತಮ ಫಲಿತಾಂಶ ಖಂಡಿತಾ ನಿರೀಕ್ಷಿಸಬಹುದು.

## ಚೆಸ್: ಓದಿಗೂ ಆಟಕ್ಕೂ...

**ಕೆ.ಎಚ್. ಉರ್ವಿಶ್ ಪ್ರಶಾಂತ್**

**ವಿಜ್ಞಾನ ವಿಭಾಗ, ರಾಜ್ಯಕ್ಕೆ ಎರಡನೇ ಸ್ಥಾನ (597 ಅಂಕ), ಇಂಗ್ಲಿಷ್ ಮಾಧ್ಯಮ, ಆದಿಚುಂಚನಗಿರಿ ಪಿಯು ಕಾಲೇಜು, ಮೈಸೂರು**



ಪರೀಕ್ಷೆಯಲ್ಲಿ ಚೆನ್ನಾಗಿ ಮಾಡ್ತೀನಿ ಎನ್ನುವ ಭರವಸೆ ಇತ್ತು. ಎಂಟ್ರೆನ್ಸ್ ಪರೀಕ್ಷೆಗಳಿಗೆ ಹೆಚ್ಚು ಗಮನ ಕೇಂದ್ರೀಕರಿಸಿದ್ದರಿಂದ ಬೋರ್ಡ್ ಪರೀಕ್ಷೆಯಲ್ಲಿ ಟಾಪರ್ ಆಗಬಹುದು ಎಂದು ನಿರೀಕ್ಷೆ ಮಾಡಿರಲಿಲ್ಲ. ನಿರೀಕ್ಷೆಯನ್ನು ಮೀರಿ ಮೊದಲ ಸ್ಥಾನ ಬಂದಿದ್ದು ಖುಷಿ ಕೊಟ್ಟಿದೆ. ಜೆಇ ಅಡ್ವಾನ್ಸ್ ಮಾಡಿಕೊಂಡು ಐಐಟಿಯಲ್ಲಿ ಓದಬೇಕು ಎನ್ನುವುದು ಆಸೆ. ಆಸಕ್ತಿ ಇರುವ ವಿಷಯವನ್ನು ಆಯ್ಕೆಮಾಡಿಕೊಳ್ಳಬೇಕು. ಶಿಕ್ಷಕರೇ ಮೊದಲ ಮಾರ್ಗದರ್ಶಕರು, ಅವರಿಂದ ಲಭ್ಯ ಆಗುವ ಸೌಲಭ್ಯಗಳನ್ನು ತೆಗೆದುಕೊಳ್ಳಬೇಕು. ಪೋಷಕರ ಸಹಾಯ ತುಂಬ ಮುಖ್ಯ, ಅದನ್ನು ಅವರು ಕೊಡುತ್ತಾರೆ. ಅದೆಲ್ಲವನ್ನು ಬಳಸಿಕೊಂಡು ಪರಿಶ್ರಮದಿಂದ ಕೆಲಸ ಮಾಡಬೇಕು.

ಮೊದಲಿನಿಂದಲೂ ನನಗೆ ಓದಲು ಆಸಕ್ತಿ ಇತ್ತು. ಒಬ್ಬನೇ ಜೋರಾಗಿ ಓದುತ್ತಿದ್ದೆ. ಡೌಟ್ ಇದ್ದರೆ ಅಪ್ಪನ ಹತ್ತಿರ ಚರ್ಚೆ ಮಾಡುತ್ತಿದ್ದೆ. ಪ್ರತಿದಿನ ಒಂದೇ ರೀತಿ ಓದಲು ಆಗುವುದಿಲ್ಲ. ನಿತ್ಯವೂ ಸಮಯ ಸಂದರ್ಭಕ್ಕೆ ತಕ್ಕಂತೆ ಸಮಯ ಹೊಂದಿಕೆ ಮಾಡಿಕೊಳ್ಳುತ್ತಿದ್ದೆ. ಒಟ್ಟಾರೆ ಪ್ರತಿ ದಿನ 4–5 ಗಂಟೆ ಓದುತ್ತಿದ್ದೆ. ಬೇಜಾರಾದರೆ ಫ್ಯಾಮಿಲಿ ಜೊತೆ ಕಾಲ ಕಳೀತಿದ್ದೆ. ನನ್ನ ತಂಗಿ ಜೊತೆ ಚೆಸ್ ಆಡ್ತಿದ್ದೆ. ಅಜ್ಜಿ ಜೊತೆ ಅಳಗುಳಿ ಮನೆ, ಚೌಕಾಬಾರ ಆಡ್ತಿದ್ದೆ. ಆನ್‌ಲೈನ್‌ನಲ್ಲಿ ಚೆಸ್ ಆಡ್ತಿದ್ದೆ. ತೀರಾ ಬೋರ್ ಆದರೆ ಅಪ್ಪ–ಅಮ್ಮನ ಜೊತೆ ಸಿನಿಮಾ ನೋಡುತ್ತಿದ್ದೆ.

ಅಪ್ಪ ಕೆ.ವಿ. ಹರೀಶ್ ಪ್ರಶಾಂತ್ ಕಂಪನಿಯೊಂದರ ಬಯೋಕೆಮಿಸ್ಟ್ರಿ ವಿಭಾಗದಲ್ಲಿ ವಿಜ್ಞಾನಿ, ಅಮ್ಮ ಡಾ. ಎಂ.ಆರ್. ಸವಿತಾ ಪ್ರಶಾಂತ್ ಸಹಾಯಕ ಪ್ರಾಧ್ಯಾಪಕಿ.